**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವೆ ನಂ**. 1117/2013** ದಿನಾಂಕಃ **23.06.2026**

ಡಿ.ಡಬ್ಲೂಃ**-01**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು :**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಆರ್.ಜೆ.ಪಿ. ರವರಿಂದಃ-**

ದಾವಾ ಆಸ್ತಿ 5 ಎಕರೆ 5 ಗುಂಟೆ ವಿಸ್ತೀರ್ಣ ಇದೆ. ದಾವಾ ಆಸ್ತಿ ನಮ್ಮ ತಂದೆ ಭೀಮಪ್ಪ, ಇಟ್ಟಪ್ಪ ಎಂಬುವವರಿಂದ ಖರೀದಿ ಮಾಡಿದ್ದರು ಎಂದರೆ ಸರಿ. ದಿಃ 12.02.1970 ರ ಕ್ರಯ ಪತ್ರದಂತೆ ಖರೀದಿ ಮಾಡಲಾಗಿತ್ತು ಎಂದರೆ ಸರಿ. ಆ ಪ್ರಕಾರವಾಗಿ ನನ್ನ ತಂದೆ ಹೆಸರಿಗೆ ಡ್ಯೆರಿ ಮಂಜೂರು ಆಗಿತ್ತು ಎಂದರೆ ಸರಿ. ಈ ಹಿಂದೆ ಓ.ಎಸ ನಂಬರ 511/2007ರಂತೆ ಒಂದು ದಾವೆ ಸಲ್ಲಿಸಿದ್ದು ಸದರಿ ದಾವೆಯಲ್ಲಿ ರಾಜಿ ಅರ್ಜಿ ಸಲ್ಲಿಸಿ ಡಿಕ್ರಿ ಪಡೆದುಕೊಳ್ಳಲಾಗಿದೆ ಎಂದರೆ ಸರಿ. ಸದರಿ ದಾವೆಯ ವಾದ ಪತ್ರದ ಪ್ಯಾರಾ ನಂಬರ 3 ರಲ್ಲಿ ಏನು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಓ.ಎಸ ನಂಬರ 511/2007ರ ಆದೇಶ ಪ್ರಶ್ನಿಸಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿನ ಆದೇಶದ ನಂತರ ನಾನು ಒಂದು ಮಿಸಲೇನಿಯಸ ನಂಬರ 18/2013 ಸಲ್ಲಿಸಿದ್ದೇ ಎಂದರೆ ಸರಿಯಲ್ಲ. ಅದರಲ್ಲಿ ನನ್ನ ವಿಚಾರಣೆ ಆಗಿ ಸದರಿ ಅರ್ಜಿ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಪರವಾಗಿ ಯಾವ ದಿನಾಂಕದಂದು ಖರೀದಿ ಪತ್ರ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಮೇಲ್ಕಂಡ ದಾವೆಯಲ್ಲಿ ಅಪಸಾತ ಡಿಕ್ರಿ ಪ್ರಕಾರ ನನ್ನ ಹಿಸ್ಸೆಗೆ ಬಂದಿದ್ದ ಬೆಂಡಿಗೇರಿ ಗ್ರಾಮದ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದು ನನ್ನ ಹೆಸರಿನಲ್ಲಿತ್ತು ಎಂದರೆ ಸರಿ. ದಾವಾ ಆಸ್ತಿಯ ಪೂರ್ಣ ವಿಸ್ತೀರ್ಣ ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿ.

5 ನೇ ಪ್ರತಿವಾದಿ ಹೆಸರಿಗೆ ಕ್ರಯಪತ್ರವಾದ ನಂತರ ಅದರಂತೆ ಖಾತೆ ವರ್ಗಾವಣೆ ಆಗಿದೆ ಎಂದರೆ ಸರಿ. ಓ.ಎಸ ನಂಬರ 511/2007ರಲ್ಲಿ ಆದ ಆದೇಶದಂತೆ ನಮ್ಮ ಹೆಸರಿಗೆ ಡ್ಯೆರಿ ನಮೂದು ಆಗಿದೆ ಎಂದರೆ ಸರಿ. 5 ನೇ ಪ್ರತಿವಾದಿ ಜಮೀನಿನ ಪೂರ್ವಕ್ಕೆ ಇರುವ 19 ಗುಂಟೆ ಜಮೀನು ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. 5 ನೇ ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ 2 ಎಕರೆ 22 ಗುಂಟೆ ನನ್ನ ತಮ್ಮನ ಹೆಸರಿನಲ್ಲಿದೆ ಎಂದರೆ ಸರಿ. ಅದರಂತೆ ನನ್ನ ತಮ್ಮ ಕಬ್ಜಾ ವಹಿವಾಟು ಮಾಡುತ್ತಿದ್ದಾನೆ ಎಂದರೆ ಸರಿ. 5ನೇ ಪ್ರತಿವಾದಿಯ ಜಮೀನಿನ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ಉತ್ತರಕ್ಕೆ ಕಾಂಕ್ರೇಟ ರಸ್ತೆ ಇದೆ ಎಂದರೆ ಸರಿ.

ಅದೇ ರಸ್ತೆ ಮೂಲಕ ನನ್ನ ತಮ್ಮ ಅವನ ಜಮೀನಿಗೆ ಹೋಗಿ ಬಂದು ಮಾಡುತ್ತಾನೆ ಎಂದರೆ ಸರಿ. 5ನೇ ಪ್ರತಿವಾದಿಯು ತಾನು ಖರೀದಿ ಮಾಡಿರುವ 1 ಎಕರೆ 38 ಗುಂಟೆಯಲ್ಲಿ ಒಂದು ಮನೆ ನಿರ್ಮಾಣ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಒಂದು ಬೋರವೇಲ ಕೊರೇಸಿದ್ದಾನೆ ಎಂದರೆ ಸರಿಯಲ್ಲ. ಸರ್ವೆ ನಂಬರ 1193/3 ಕ ರಲ್ಲಿ ಇರುವ ಬಾಂವಿಯಿಂದ ಪೈಪಲೈನ ಮಾಡಿ ನೀರು ವ್ಯವಸ್ಥೆ ಹೊಂದಿದ್ದಾನೆ ಎಂದರೆ ಸರಿಯಲ್ಲ. ಅದೇರೀತಿ 5 ನೇ ಪ್ರತಿವಾದಿ 1 ಎಕರೆ 38 ಗುಂಟೆಯಲ್ಲಿ ಒಂದು ದ್ರಾಕ್ಷಿ ಬೆಳೆ ಮಾಡಿದ್ದಾನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಬೆಂಡಿಗೇರಿ ಗ್ರಾಮದ ಸರ್ವೆ ನಂಬರನಲ್ಲಿರುವ ಜಮೀನನ್ನು ಖರೀದಿ ಮಾಡುವ ಸಲುವಾಗಿ ಈ ಜಮೀನನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿತ್ತು ಎಂದರೆ ಸರಿಯಲ್ಲ. ಓ.ಎಸ ನಂಬರ 1981/2011, 38/2009ರ ದಾವೆಗಳನ್ನು ಯಾರು ಯಾರ ವಿರುದ್ದ ಯಾವ ಕಾರಣಕ್ಕಾಗಿ ಹೂಡಿದ್ದರು ಎಂದರೆ ಸಾಕ್ಷಿಯು ಹೆಣ್ಣು ಮಕ್ಕಳು ಪಾಲು ಕೋರಿ ಹೂಡಿದ್ದರು ಎಂದು ನುಡಿಯುತ್ತಾರೆ. ಆ ದಾವೆಗಳನ್ನು ಸಹ ಪ್ರಸ್ತುತ ದಾವೆಯಲ್ಲಿನ ದಾವಾ ಆಸ್ತಿ ಕುರಿತು ಹೂಡಲಾಗಿತ್ತು. ಆ ದಾವೆಗಳಲ್ಲಿ ನಾನು ಯಾವುದೇ ಹಿಸ್ಸೆ ಕೋರಿ ಪ್ರತ್ಯರ್ಜಿ ಸಲ್ಲಿಸಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ